# ರೆಕ್ಕೆ ಇರುವೆ

■ ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು

ಇರುವೆಗಳಿಗೆ ರೆಕ್ಕೆ ಬಂತು
ಹಾರುವುದಕೆ ಶಕ್ತಿ ಬಂತು

ಅಮ್ಮ ಇರುವೆ ಅಪ್ಪ ಇರುವೆ
ತಮ್ಮ ಇರುವೆ ತಂಗಿ ಇರುವೆ
ಎಲ್ಲಾ ಕಲೆತು ಹಾರಿದವು
ಮೇಲೆ ಕೆಳಗೆ ಜಿಗಿದು ಜಿಗಿದು
ಮನಸುಪೂರ್ತಿ ನಲಿದವು

ಗಾಳಿಯಲ್ಲೇ ತೇಲಿದಂತೆ
ಭ್ರಮಿಸಿ ಖುಷಿಯಪಟ್ಟವು
ತಾವೂ ಹಕ್ಕಿಯಾದೆವೆಂಬ
ಕಲ್ಪನೆಯಲ್ಲೇ ಬೀಗಿದವು

ನಭದ ತುಂಬಾ ಹಾರುತಿರುವ
ಮೋಡದೊಳಗೆ ನುಸುಳುತಿರುವ
ತಾರೆಗಳನು ಮುಟ್ಟುತಿರುವ
ಕನಸು ಕಂಡು ಸಂಭ್ರಮಿಸಿದವು

ದಿನಗಳುರುಳಿ ಕಾಲ ಮಾಗಿ
ರೆಕ್ಕೆಗಳೆಲ್ಲಾ ಉದುರಿದವು
ಪುತಪುತನೆ ನೆಲಕೆ ಇಳಿದು
ಮೊದಲಿನಂತೆ ತೆವಳಿದವು

ಇರುವೆಗಳಿಗೆ ರೆಕ್ಕೆ ಹೋಯ್ತು
ತೆವಳುವುದವಕೆ ಖಾತ್ರಿಯಾಯ್ತು!





**ಧೃತಿ ಗಿರಿಧರ್**
2ನೇ ತರಗತಿ,
ನ್ಯಾಷನಲ್ ಪಬ್ಲಿಕ್
ಸ್ಕೂಲ್, ಬೆಂಗಳೂರು







**ಅನಿಶಾ ಸಂತೋಷ್**
4ನೇ ತರಗತಿ,
ಸೇಂಟ್ ಜೋಸೆಫ್ಸ್
ಸೆಂಟ್ರಲ್ ಸ್ಕೂಲ್,
ಮೈಸೂರು



**ಸಮೃದ್ಧಿ ಎಸ್ ಪಾವಟೆ**
2ನೇ ತರಗತಿ,
ಎಸ್ಆರ್‌ಕೆಎಸ್
ಸ್ಕೂಲ್, ಗೋಕಾಕ್



ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ಡವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in